11.	ಹಾಸನ	275
12.	ಕೊಡಗು	315
13.	ಕೋಲಾರ	318
14.	ಮಂಡ್ಯ	1,107
15.	ಮೈಸೂರು	1,473
16.	ರಾಯಚೂರು	310
17.	ಶಿವಮೊಗ್ಗ	1,470
18.	ತುಮಕೂರು	1,238
19.	ಉತ್ತರ ಕನ್ನಡ	108
20.	ಬೆಂಗಳೂರು (ನಗರ)	601
	ಒಟ್ಟು	15,022

6) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 495 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಉಡುಪಿ ತಾಲ್ಲೂಕು ಮಂದರ್ತಿಯಲ್ಲಿ ಸರ್ಕಾರಿ ಆಸ್ಪತ್ರೆ

318 (501) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಉಡುಪಿ ತಾಲ್ಲೂಕು ಮಂದರ್ತಿ ಮಂಡಲದ ಹತ್ತಿರ ಸುಸಜ್ಜಿತ ಆಸ್ಪತ್ರೆಗಳು ಕಾರ್ಯ ನಿರ್ವಹಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಮಂಡಲ ಕೇಂದ್ರ, ಮಂದರ್ತಿಯಲ್ಲಿ ಸರ್ಕಾರಿ ಆಸ್ಪತ್ರೆಯನ್ನು ನಿರ್ಮಿಸುವಂತೆ ಕೋರಿ ಸಾರ್ವಜನಿಕರು ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇಲ್ಲಿ ಆಸ್ಪತ್ರೆ ಸ್ಥಾಪಿಸುವುದರಿಂದ ಸಾರ್ವಜನಿಕರ ಬಹುಕಾಲದ ಬೇಡಿಕೆಯನ್ನು ಸರ್ಕಾರ ಕೂಡಲೇ ಈಡೇರಿಸುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಉಡುಪಿ ತಾಲ್ಲೂಕಿನಲ್ಲಿ ರೇಷ್ಮೆ ಕೃಷಿಗೆ ಪ್ರೋತ್ಸಾಹ

320 (361) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ರೇಷ್ಮೆ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ದಕ್ಷಿಣ ಕನ್ನಡ ಜಿಲ್ಲೆಯ ಹವಾಗುಣ ರೇಷ್ಮೆ ಕೃಷಿಗೆ ಯೋಗ್ಯವಾಗಿರುವುದು ರೇಷ್ಮೆ ಇಲಾಖೆಗೆ ತಿಳಿದಿದೆಯೇ?

ಆ) ಈ ಪ್ರದೇಶದಲ್ಲಿ ಬೆಳೆಸಿದ ಮೊಟ್ಟೆಗಳು ಉತ್ತಮ ಗುಣಮಟ್ಟದಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಉಡುಪಿ ತಾಲ್ಲೂಕಿನಲ್ಲಿ ಈಗ ಎಷ್ಟು ಎಕರೆ ಪ್ರದೇಶದಲ್ಲಿ ರೈತರು ರೇಷ್ಮೆ ಕೃಷಿ ವ್ಯವಸಾಯ ಮಾಡುತ್ತಿದ್ದಾರೆ ಹಾಗೂ ಇಲಾಖೆಯಿಂದ ಈ ಕೃಷಿಗೆ ನೀಡುವ ಪ್ರೋತ್ಸಾಹಗಳು ಯಾವುವು?

ಈ) ಉಡುಪಿಯಲ್ಲಿ ರೇಷ್ಮೆ ಚಾಕಿ ಸಾಕಾಣಿಕಾ ಕೇಂದ್ರ ಅಥವಾ ರೇಷ್ಮೆ ಕೃಷಿ ತಾಂತ್ರಿಕ ಸೇವಾ ಕೇಂದ್ರ ಸ್ಥಾಪಿಸಿ ಈ ಪ್ರದೇಶದ ಜನರಿಗೆ ರೇಷ್ಮೆ ಕೃಷಿ ವ್ಯವಸಾಯದಲ್ಲಿ ತೊಡಗುವಂತೆ ಇಲಾಖೆ ಮಾರ್ಗದರ್ಶನ ನೀಡುವಲ್ಲಿ ಸರ್ಕಾರ ಕ್ರಮ ಕೈಗೊಳ್ಳಬಹುದು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):-

ಅ) ಹೌದು.

ಆ) ಇಲ್ಲ.

ಇ) ಉಡುಪಿ ತಾಲ್ಲೂಕಿನಲ್ಲಿ ಸುಮಾರು 188 ಎಕರೆಗಳಲ್ಲಿ ಹಿಪ್ಪು ನೇರಳೆ ವ್ಯವಸಾಯದಲ್ಲಿ ಇದೆ.

ರೇಷ್ಮೆ ಕೃಷಿಗೆ ಇಲಾಖೆ ನೀಡಿರುವ ಪ್ರೋತ್ಸಾಹಗಳು:

1) ವಿಶೇಷ ಘಟಕಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಗಿರಿಜನ ಯೋಜನೆಯಡಿಯಲ್ಲಿ ಪರಿಶಿಷ್ಟ ಪಂಗಡದವರಿಗೆ ಹುಳು ಸಾಕಣೆ ಉಪಕರಣಗಳನ್ನು ಕೊಡುವುದು, ಹುಳುಸಾಕಣೆ ಮನೆಗಳಿಗೆ ಸಹಾಯ ಧನ ಕೊಡುವುದು, ಹೊಸದಾಗಿ ಹಿಪ್ಪು ನೇರಳೆ ವ್ಯವಸಾಯ ಕೈಗೊಳ್ಳಲು ಪ್ರೋತ್ಸಾಹ ಧನ ಕೊಡುವುದು, ಮತ್ತು ರೋಗಗಳನ್ನು ನಿಯಂತ್ರಿಸಲು, ತಡೆಗಟ್ಟಲು ರೋಗ ನಿರೋಧಕಗಳನ್ನು ಒದಗಿಸುವುದು.

2) ಬೇರೆ ಎಲ್ಲಾ ರೇಷ್ಮೆ ಕೃಷಿಕರಿಗೆ ಹಿಪ್ಪು ನೇರಳೆ ವ್ಯವಸಾಯ ಕೈಗೊಳ್ಳಲು, ಹುಳುಸಾಕಣೆ ಉಪಕರಣಗಳನ್ನು ಕೊಳ್ಳಲು, ಹುಳು ಸಾಕಣೆ ಮನೆ ಕಟ್ಟಲು ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿಂದ ಸಾಲ ಸೌಲಭ್ಯ ಒದಗಿಸುತ್ತಿದೆ.

3) ಪಶ್ಚಿಮ ಘಟ್ಟದ ಯೋಜನೆಯಡಿಯಲ್ಲಿ ಸಣ್ಣ ಅತಿ ಸಣ್ಣ ರೈತರಿಗೆ ಹುಳು ಸಾಕಣೆ ಉಪಕರಣಗಳನ್ನು ಕೊಡುವುದು.

ಈ) 1) ರೈತರಿಗೆ ತಾಂತ್ರಿಕ ಸಲಹೆಗಳನ್ನು ನೀಡಲು ಒಂದು ತಾಂತ್ರಿಕ ಸಲಹಾ ಕೇಂದ್ರವನ್ನು ಸ್ಥಾಪಿಸಿದೆ.

2) ಒಂದು ವಿಸ್ತರಣಾ ಮತ್ತು ಚಾಕಿ ಕೇಂದ್ರವನ್ನು ಸ್ಥಾಪಿಸಿದೆ.

3) 2 ಚಾಕಿ ಸಾಕಣೆ ಕೇಂದ್ರಗಳನ್ನು ಮತ್ತು 2 ವಲಯ ಕಛೇರಿಗಳನ್ನು ಸ್ಥಾಪಿಸಿದೆ.

ವರದಿಯನ್ನು ಒಪ್ಪಿಸುವುದು

DEPUTY SPEAKER :- I present the first Report of the Committee on Private Members and Resolutins.

SRI G . S. PATIL:- Sir, I move that the House agrees with the Report..

ಅಧ್ಯಕ್ಷರು:- ವರದಿಯನ್ನು ಒಪ್ಪಿಸಲಾಯಿತು. ಮಾನ್ಯ ಯಡಿಯೂರಪ್ಪನವರು ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ:- ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆಜ್ಞೆಯನ್ನು ಪ್ರತಿಭಟಿಸಿ ಶ್ರೀ ಅಶ್ವಥ್, ಭಾ.ಪ. ಅವರಿಂದ ಉರುಳು ಸೇವೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೆ, ನಾನು ಒಂದು ಪತ್ರ ಬರೆದಿದ್ದೇನೆ. ಈ ಕಾವೇರಿ ವಿವಾದದ ನ್ಯಾಯ ಮಂಡಳಿಯ ಮಧ್ಯಂತರ ಆಜ್ಞೆಯನ್ನು ಪ್ರತಿಭಟಿಸಿ ಕನ್ನಂಬಾಡಿಯಿಂದ ಸುಮಾರು 37 ದಿವಸಗಳ ಕಾಲ 167 ಕಿಲೋ ಮೀಟರ್ ದೂರ ಶ್ರೀ ಅಶ್ವಥ್ ಭಾ.ಪ. ಎನ್ನುವವರು ಕನ್ನಡ ಸಂಘದವರ ವತಿಯಿಂದ ಉರುಳು ಸೇವೆ ಮಾಡಿಕೊಂಡು ಇವತ್ತು ಬೆಂಗಳೂರನ್ನು ತಲುಪಿದ್ದಾರೆ. ಕರ್ನಾಟಕದ ಕಾವೇರಿ ಜಲವಿವಾದ ವಿಚಾರದಲ್ಲಿ ಅನೇಕರು ತಮ್ಮ ತಮ್ಮದೇ ಆದ ರೀತಿಯಲ್ಲಿ ಪ್ರತಿಭಟನೆಯನ್ನು ವ್ಯಕ್ತ ಮಾಡಿದ್ದಾರೆ. ಅವರು ಈ ದಿವಸ ಬೆಂಗಳೂರನ್ನು ತಲುಪಿದ್ದು ಸ್ವಾಗತಿಸುವುದಕ್ಕಾಗಿ ನಾನು ಹೋಗಿದ್ದೆ. ಅವರು ಎಷ್ಟೊಂದು ಶ್ರಮ ಪಹಿಸಿದರು. ಈ ಸತ್ಯಾಗ್ರಹಿಗೆ